ತಾನೇ ಎಂಬ ಭಾವನೆ ಹೆಣ್ಣಿನ ಮನದಲ್ಲಿ ಆಳವಾಗಿ ಬೇರೂರಿತ್ತು. ಸಹಿಸಿಕೊಳ್ಳುತ್ತಿದ್ದಳು. ಆದರೆ, ಬದಲಾದ ಕಾಲಮಾನ, ಶಿಕ್ಷಣ, ತಿಳಿವಳಿಕೆಯ ಬಳಿಕ ಹೆಣ್ಣು ತಾನಿನ್ನು ಇಂಥ ದೌರ್ಜನ್ಯಗಳನ್ನು ಸಹಿಸಿಕೊಳ್ಳಬೇಕಿಲ್ಲ ಎಂಬ ಅರಿವು ಮೂಡಿದ್ದೇ ಕಾನೂನಿನ ನೆರವಿನಿಂದ. ಅಂತೆಯೇ ಉದ್ಯೋಗದ ಸ್ಥಳಗಳಲ್ಲಿ ಹೆಣ್ಣುಮಕ್ಕಳ ಮೇಲಿನ ಲೈಂಗಿಕ ಕಿರುಕುಳ ತಡೆಯಲು ‘ಪಾಷ್’ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗಿದೆ. ಹೆಣ್ಣು ಎಂಬ ಕಾರಣಕ್ಕೆ ಇಂಥ ದೌರ್ಜನ್ಯಗಳನ್ನು ಸಹಿಸಿಕೊಳ್ಳಬೇಕಿಲ್ಲ ಎಂಬ ಅರಿವು ಮೂಡಿಸುವ ಇಂಥ ಕಾಯ್ದೆಗಳು ಆಕೆಯನ್ನು ಸಬಲೀಕರಣ ಮಾಡುವಲ್ಲಿ ದಿಟ್ಟ ಹೆಜ್ಜೆಗಳನ್ನಿಟ್ಟಿವೆ.



ಅತ್ಯಾಚಾರದಂಥ ಪ್ರಕರಣಗಳಲ್ಲಿ ಸಾಕ್ಷ್ಯಾಧಾರಗಳಿದ್ದರೆ ಮಾತ್ರ ಅಪರಾಧಿಗಳಿಗೆ ಶಿಕ್ಷೆ ಆಗುತ್ತದೆ. ಅಪರಾಧಿಗಳಿಗೆ ಶಿಕ್ಷೆ ಆಗದಿರಲು ಸಮಾಜದ ಎಲ್ಲಾ ಆಯಾಮಗಳಲ್ಲೂ ಕೊರತೆಗಳಿವೆ. ಇವುಗಳನ್ನು ಸರಿಪಡಿಸಿ ಸೂಕ್ತ ವ್ಯವಸ್ಥೆಯನ್ನು ರೂಪಿಸಬೇಕಿದೆ. ಮುಖ್ಯವಾಗಿ ಸಂತ್ರಸ್ತೆಯನ್ನು ಹೇಗೆ ನಡೆಸಿಕೊಳ್ಳಬೇಕು ಎಂಬ ಬಗ್ಗೆ ಲಿಂಗಸೂಕ್ಷ್ಮತೆಯನ್ನು ನಮ್ಮ ಸಮಾಜ ರೂಪಿಸಿಕೊಳ್ಳಬೇಕಿದೆ. ಹಾಗಾಗಿ, ಅತ್ಯಾಚಾರ ವಿರೋಧಿ ಕಾನೂನು ಮತ್ತಷ್ಟು ಬಲಿಷ್ಠವಾಗಬೇಕಿದೆ.

## ಸಂತ್ರಸ್ತರಿಗೆ ಸಾಂತ್ವನ

ಗರ್ಭಪಾತಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಅತ್ಯಾಚಾರಕ್ಕೊಳಗಾದ ಹೆಣ್ಣುಮಕ್ಕಳು ಈ ಹಿಂದೆ ಗರ್ಭಿಣಿಯಾದರೆ ಅನಿವಾರ್ಯವಾಗಿ ಮಕ್ಕಳನ್ನು ಹೆರಬೇಕಿತ್ತು. ಆದರೆ, ಈಗ ಕಾನೂನಿನ ಬೆಂಬಲ ಇರುವುದರಿಂದ ಆಕೆ ತನ್ನ ಮೇಲಿನ ಹಕ್ಕನ್ನು ಪ್ರತಿಪಾದಿಸಬಹುದು. ಗರ್ಭಪಾತ ಮಾಡಿಸಿಕೊಳ್ಳಬಹುದು. ಹಿಂದೆ ಅತ್ಯಾಚಾರಿಯ ಜತೆಗೇ ಮದುವೆಯಾಗಬೇಕಿತ್ತು. ಈಗ ಮಹಿಳೆಯರು ‘ನಮ್ಮ ದೇಹ ನಮ್ಮ ಹಕ್ಕು’ ಎಂದು ಪ್ರತಿಪಾದಿಸಬಹುದು. ಅಂತೆಯೇ ವಿವಾಹಿತೆ ಬಲವಂತದಿಂದ ಗರ್ಭಿಣಿಯಾದರೂ ಆಕೆಗೆ ಇಷ್ಟವಿಲ್ಲದಿದ್ದರೆ ಕಾನೂನು ಬೆಂಬಲದಿಂದ ಗರ್ಭಪಾತ ಮಾಡಿಸಿಕೊಳ್ಳಬಹುದು. ಮಗು ಬೇಕಾ, ಬೇಡವಾ ಅನ್ನುವುದನ್ನು ತಾಯಿ ತೀರ್ಮಾನಿಸಬಹುದು. ಹೆಂಡತಿ, ತನ್ನ ಗಂಡನ ಮಗುವಿಗೆ ಬಲವಂತವಾಗಿ ತಾಯಿಯಾಗಬೇಕಿಲ್ಲ.

ಮದುವೆಯಾಗಿದ್ದಾನೆ ಅನ್ನುವ ಒಂದೇ ಕಾರಣಕ್ಕೆ ಹೆಣ್ಣಿಗೆ ಇಷ್ಟವಿಲ್ಲದಿದ್ದರೂ, ಗಂಡನಿಗಾಗಿ ಬಲವಂತವಾಗಿ ದೈಹಿಕ ಸಂಪರ್ಕ ಹೊಂದಬೇಕಿತ್ತು. ಇದನ್ನು ವಿರೋಧಿಸಿದರೆ, ಆಕೆಗೆ ಹೊಡೆದು, ಬಡಿದು ಗಂಡಸು ಲೈಂಗಿಕ ತೃಷೆ ತೀರಿಸಿಕೊಳ್ಳುತ್ತಿದ್ದ. ಅದನ್ನು ಹೆಣ್ಣು ಹೇಳಿಕೊಳ್ಳಲೂ ಆಗುತ್ತಿರಲಿಲ್ಲ. ಆದರೆ, ಈಗ ಕಾನೂನು ಬೆಂಬಲದಿಂದ ಆಕೆ ಅದನ್ನು ಧೈರ್ಯವಾಗಿ ನಿರಾಕರಿಸಬಹುದು.

ಬಾಡಿಗೆ ತಾಯ್ತನದ ಅವಕಾಶವೂ ಈಗಿನ ಹೆಣ್ಣುಮಕ್ಕಳಿಗೆ ವರವಾಗಿದೆ. ಈ ಹಿಂದೆ ಹೆಣ್ಣು ಮಗು ಹೆತ್ತಿಲ್ಲ ಅಂದರೆ ಆಕೆಯನ್ನು ಬಂಜೆ ಎಂದು ಮೂದಲಿಸಲಾಗುತ್ತಿತ್ತು. ಎಷ್ಟೋ ಸಂದರ್ಭಗಳಲ್ಲಿ ಮಗು ಆಗಿಲ್ಲ ಎಂಬ ನೆಪ ಇಟ್ಟುಕೊಂಡೇ ಗಂಡು ಮತ್ತೊಂದು ಮದುವೆ ಆಗಿಬಿಡುತ್ತಿದ್ದ. ಆಗ ಮೊದಲನೇ ಪತ್ನಿಯನ್ನು ನಿರ್ಲಕ್ಷಿಸಲಾಗುತ್ತಿತ್ತು.

ಆದರೆ, ತಂತ್ರಜ್ಞಾನದ ನೆರವಿನಿಂದ ಈಗ ಭ್ರೂಣವನ್ನು ಬಾಡಿಗೆ ಪಡೆದು ಮಗು ಹುಟ್ಟಿದ ಬಳಿಕ ಬೆಳೆಸಬಹುದು. ತಾಯ್ತನಕ್ಕೆ ಮತ್ತೊಂದು ಕೊಡುಗೆ ಎಂದರೆ, ಆರ್ಥಿಕವಾಗಿ ಸಬಲಳಾದ, ಮಾನಸಿಕವಾಗಿ ಆರೋಗ್ಯವಂತವಾಗಿರುವ ಪ್ರೌಢ ಹೆಣ್ಣು ಅವಿವಾಹಿತೆಯಾಗಿದ್ದರೂ ಮಗುವನ್ನು ದತ್ತು ಪಡೆಯಬಹುದು ಇಲ್ಲವೇ ಐವಿಎಫ್ ಮೂಲಕ ತಾಯಿಯಾಗುವ ಸಾಧ್ಯತೆಯೂ ಇದೆ. ಸಿಂಗಲ್ ಪೇರೆಂಟ್ ಆಗಿ ಯಶಸ್ವಿಯಾದ ಅನೇಕ ಹೆಣ್ಣುಮಕ್ಕಳು ನಮ್ಮ ನಡುವೆ ಇದ್ದಾರೆ.

## ಘನತೆಯ ಬದುಕಿಗೆ ಆಸ್ತಿಹಕ್ಕು

ಈ ಶತಮಾನದಲ್ಲಿ ಹೆಣ್ಣುಮಕ್ಕಳ ಪಾಲಿಗೆ ಶಕ್ತಿ ತುಂಬಿದ ಮತ್ತೊಂದು ಕಾನೂನೆಂದರೆ, ಪಿತ್ರಾರ್ಜಿತ ಆಸ್ತಿಯಲ್ಲಿ ಗಂಡಿನಷ್ಟೇ ಹೆಣ್ಣಿಗೂ ಸಮಪಾಲು ಕಲ್ಪಿಸುವ ಆಸ್ತಿಯ ಹಕ್ಕು. ಪುತ್ರನಷ್ಟೇ ಮನೆಯ ವಾರಸುದಾರ, ಹೆಣ್ಣು ಯಾವತ್ತಿದ್ದರೂ ಪರರ ಸ್ವತ್ತು; ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎಂಬ ಮಾತುಗಳಿಗೆ ಕಡಿವಾಣ ಹಾಕಿದ್ದೇ ಆಸ್ತಿಯ ಹಕ್ಕು ಕಾಯ್ದೆ. ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು ಕಲ್ಪಿಸಿಕೊಟ್ಟಿದ್ದರ ಫಲ ಇಂದು ಅನೇಕ ಹೆಣ್ಣುಮಕ್ಕಳು ಸ್ವತಂತ್ರವಾಗಿ ಜೀವನ ರೂಪಿಸಿಕೊಳ್ಳಲು, ಘನತೆಯಿಂದ ಬದುಕಲು ನೆರವಾಗಿದೆ.

ಇದರ ಜತೆಗೆ ಮೂಲಭೂತ ಹಕ್ಕುಗಳಾಗಿರುವ ಉದ್ಯೋಗದ ಸ್ಥಳದಲ್ಲಿ ತಾಯ್ತನ ರಜೆಯ ಕಾಯ್ದೆ, ಬಡ್ತಿ, ಸಮಾನ ಅವಕಾಶದ ಹಕ್ಕುಗಳು ಹೆಣ್ಣಿನ ಸಬಲೀಕರಣಕ್ಕೆ ಪೂರಕವಾಗಿವೆ. ಅಂತೆಯೇ ಹೆಣ್ಣು ಭ್ರೂಣಹತ್ಯೆ, ಮಹಿಳೆಯ ಘನತೆಗೆ ಕುಂದು ತರುವಂಥ ಸಂದೇಶಗಳು, ಲೈಂಗಿಕ ಅಪರಾಧಿಕ ನಡವಳಿಕೆಗಳು, ಶೋಷಣೆ, ಅಂತರ್ಜಾಲದಲ್ಲಿನ ಅಪರಾಧಗಳಿಗೆ ಕಾನೂನಿನಲ್ಲಿ ಶಿಕ್ಷೆಗೆ ಅವಕಾಶವಿದೆ.

ಹೆಣ್ಣಿನ ರಕ್ಷಣೆಗೆ ನೂರಾರು ಕಾನೂನುಗಳಿದ್ದರೂ, ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ವಿಳಂಬಗತಿಯಿದೆ. ಇದರ ಜತೆಗೆ ಸಮಾಜದ ಎಲ್ಲ ಸ್ತರಗಳಲ್ಲೂ ಲಿಂಗಸೂಕ್ಷ್ಮತೆಯ ಕೊರತೆ ಇರುವುದು ಕಾನೂನು ಪಾಲನೆಯಲ್ಲಿ ವಿಫಲತೆಗೆ ಕಾರಣವಾಗುತ್ತಿದೆ. ಗಂಡಿನಷ್ಟೇ ಜನ್ಮದತ್ತವಾಗಿ ಪಡೆದಿರುವ ಹಕ್ಕುಗಳಿಗಾಗಿ ಹೆಣ್ಣು ಇನ್ನೂ ಹೋರಾಡಬೇಕಾಗಿರುವುದು ವಿಷಾದನೀಯ.

ಡಾ. ಬಿ.ಆರ್. ಅಂಬೇಡ್ಕರ್‌ರವರು ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿಯಾಗಿದ್ದ ಸಂದರ್ಭದಲ್ಲಿ ಮಹಿಳೆಯರ ಹಕ್ಕು ಮತ್ತು ಘನತೆಗಾಗಿ ಕಾನೂನು ರೂಪಿಸಲು ಮಂಡಿಸಿದ ಹಿಂದೂ ಕೋಡ್ ಬಿಲ್ ಅನ್ನು ವಿರೋಧಿಸಿದ ಭಾರತೀಯ ಮನಸ್ಸು ಅಂಬೇಡ್ಕರರು ಅಂದು ಪ್ರತಿಪಾದಿಸಿದ ಮಹಿಳಾ ಕಾನೂನುಗಳನ್ನೇ ತಡವಾಗಿಯಾದರೂ ಹಂತ ಹಂತವಾಗಿ ಜಾರಿಗೊಳಿಸುತ್ತಾ ಬಂದಿರುವುದು ಸಮಾಧಾನದ ವಿಷಯ. ಆದರೆ ಸಂವಿಧಾನ ಜಾರಿಗೊಂಡು ಲಿಂಗ ಸಮಾನತೆಯನ್ನು ಒಪ್ಪಿ ಎಪ್ಪತ್ತೈದು ವರ್ಷಗಳು ಕಳೆದಿದ್ದರೂ ಸಂಪೂರ್ಣ ಲಿಂಗ ಸಮಾನತೆ ಸಾಧಿಸಲು ಸಾಧ್ಯವಾಗಿಲ್ಲದಿರುವುದು ಮತ್ತು ಇನ್ನೂ ಪ್ರಾತಿನಿಧ್ಯದ ಕೊರತೆ ಎದುರಿಸುತ್ತಿರುವುದು, ರಾಜಕಾರಣದಲ್ಲಿ ಮಹಿಳಾ ಮೀಸಲಾತಿ ಜಾರಿಗೆ ಇನ್ನೂ ಮೀನಮೇಷ ಎಣಿಸುತ್ತಿರುವುದನ್ನು ನೋಡಿದಾಗ ಮಹಿಳೆಯ ಸ್ವಾತಂತ್ರ್ಯ ಮತ್ತು ಸ್ವಾವಲಂಬನೆ ಹಾಗೂ ಘನತೆಯ ಬದುಕಿಗಾಗಿ ಇನ್ನೂ ಹೋರಾಟ ಮಾಡಬೇಕಾದ ಅನಿವಾರ್ಯತೆ ಇದೆ.

ನಿರೂಪಣೆ: ಮಂಜುಶ್ರೀ ಎಂ. ಕಡಕೋಳ
ಪ್ರತಿಕ್ರಿಯಿಸಿ: feedback@sudha.co.in